# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01 | **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **: 537** |
| 02 | **ಮಾನ್ಯ ಸದಸ್ಯರ ಹೆಸರು** | **: ಶ್ರೀ ಎಂ. ನಾಗರಾಜು**<br>**(ವಿಧಾನಸಭೆಯಿಂದ ಚುನಾಯಿತರಾದವರು)** |
| 03 | **ಉತ್ತರಿಸುವ ದಿನಾಂಕ** | **: 12.12.2024** |
| 04 | **ಉತ್ತರಿಸುವ ಸಚಿವರು** | **: ಮಾನ್ಯ ಗೃಹ ಸಚಿವರು** |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| **ಅ)** | ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಅಥವಾ ಇನ್ನಿತರೆ ಉದ್ದೇಶಗಳಿಗಾಗಿ ವಿದೇಶಗಳಿಂದ ಬಂದಿರುವ ವಿದೇಶಿಯರು ಅವರ ವೀಸಾ ಅವಧಿ ಮುಗಿದಿದ್ದರೂ ಸಹ ಅನಧಿಕೃತವಾಗಿ ರಾಜ್ಯದಲ್ಲಿ ನೆಲೆಸಿ ಸ್ಥಳೀಯ ಕಾನೂನನ್ನು ಉಲ್ಲಂಘಿಸಿ ಶಾಂತಿ ಸುವ್ಯವಸ್ಥೆಗೆ ಭಂಗತಂದು ಗಲಭೆಗಳನ್ನು ಸೃಷ್ಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ವೀಸಾ ಅವಧಿ ಮುಗಿದಿದ್ದರೂ ಸಹ ಅನಧಿಕೃತವಾಗಿ ರಾಜ್ಯದಲ್ಲಿ ನೆಲಸಿರುವ ವಿದೇಶಿಗರ ಮೇಲೆ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಏನು ಕ್ರಮಕೈಗೊಂಡಿದೆ ಮತ್ತು ಈ ರೀತಿ ಕಾನೂನು ಬಾಹಿರವಾಗಿ ಯಾವ ದೇಶದ ವಿದೇಶಿಯರು ಹೆಚ್ಚಾಗಿ ನೆಲೆಸಿದ್ದಾರೆ;<br>(ಮಾಹಿತಿನೀಡುವುದು) | ಬಂದಿದೆ. |

ವೀಸಾ ಅವಧಿ ಮುಗಿದಿದ್ದರೂ ಸಹ ಕಾನೂನು ಬಾಹಿರವಾಗಿ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ನೈಜೀರಿಯಾ, ಸೂಡಾನ್, ಯಮೆನ್ ಹಾಗೂ ಇತರೆ ದೇಶದ ಈ ಕೆಳಗಿನಂತೆ ಒಟ್ಟು **728** ವಿದೇಶಿಯರು ನೆಲೆಸಿರುವುದು ಕಂಡು ಬಂದಿರುತ್ತದೆ.

| ಕ್ರ. ಸಂ. | ನಗರ ಮತ್ತು ಜಿಲ್ಲೆಗಳು | ಅನಧಿಕೃತವಾಗಿ ರಾಜ್ಯದಲ್ಲಿ ವಾಸವಿರುವ ವಿದೇಶಿಯರುಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 674 |
| 2 | ಬೆಂಗಳೂರು ಜಿಲ್ಲೆ | 33 |
| 3 | ಹುಬ್ಬಳ್ಳಿ-ಧಾರವಾಡ ನಗರ | 03 |
| 4 | ಕಲಬುರಗಿ ನಗರ | 01 |
| 5 | ಮಂಗಳೂರು ನಗರ | 02 |
| 6 | ಮೈಸೂರು ನಗರ | 15 |
| | **ಒಟ್ಟು** | **728** |

ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿ ಸ್ಥಳೀಯ ಕಾನೂನನ್ನು ಉಲ್ಲಂಘಿಸಿ ಶಾಂತಿ ಸುವ್ಯವಸ್ಥೆಗೆ ಭಂಗ ತಂದು ಗಲಭೆಗಳನ್ನು ಸೃಷ್ಟಿಸುತ್ತಿರುವ ವಿದೇಶಿಯರನ್ನು ಪತ್ತೆಮಾಡಿ, ಅಂತಹ ಆರೋಪಿಗಳನ್ನು ಅವರ ದೇಶದ ವಿದೇಶಿ ಮಂತ್ರಾಲಯದ ಮೂಲಕ ಆಯಾ ದೇಶಗಳಿಗೆ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯ (Ministry of External Affairs)ಕ್ಕೆ ಮಾಹಿತಿಯನ್ನು ನೀಡಿ, ಅವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೂ ಸಂಬಂಧಪಟ್ಟ ಇಲಾಖೆಯಿಂದ ನಿರ್ಗಮನ ಪರವಾನಿಗೆ (Exit Permit) ಯನ್ನು ಪಡೆಯುವವರೆಗೆ, ಇವರುಗಳನ್ನು ರಿಸ್ಟ್ರಿಕ್ಷನ್ ಸೆಂಟರ್‌ನಲ್ಲಿರಿಸಿ ಇತ್ಯರ್ಥವಾದ ನಂತರ ಅವರುಗಳ ವಿರುದ್ಧ ಗಡಿಪಾರು ಕ್ರಮ ಜರುಗಿಸಲಾಗುವುದು. ಅವಧಿ ಮೀರಿ ವಾಸವಾಗಿರುವ ವಿದೇಶಿಗರನ್ನು ಪತ್ತೆ ಮಾಡಲಾಗುತ್ತಿದ್ದು, ಪತ್ತೆಯಾದ ವಿದೇಶಿಯರ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 104 ಪ್ರಕರಣಗಳು ದಾಖಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ:-

| ಕ್ರ. ಸಂ. | ನಗರ ಮತ್ತು ಜಿಲ್ಲೆ | ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|---|
| 01 | ಬೆಂಗಳೂರು ನಗರ | 2021 | 36 |
| | | 2022 | 44 |

| | | | |
|---|---|---|---|
| | | 2023 | 09 |
| | | 2024 | 13 |
| **02** | ಹುಬ್ಬಳ್ಳಿ-ಧಾರವಾಡ ನಗರ | 2021 | 01 |
| | | 2023 | 01 |
| | | **ಒಟ್ಟು** | **104** |

ಎಫ್.ಆರ್.ಆರ್.ಒ, ಬೆಂಗಳೂರು ಕಚೇರಿರವರು ನೀಡಿರುವ ವರದಿಯಂತೆ ಕಳೆದ ಮೂರು ವರ್ಷಗಳಲ್ಲಿ ಅವಧಿ ಮೀರಿ ವಾಸವಾಗಿದ್ದ ವಿದೇಶಿಗರನ್ನು ಗಡಿಪಾರು ಮಾಡಲಾಗಿರುವ ವಿವರ ಈ ಕೆಳಕಂಡಂತಿರುತ್ತದೆ:-

| ಕ್ರ. ಸಂ. | ನಗರ ಮತ್ತು ಜಿಲ್ಲೆ | ವರ್ಷ | ಅವಧಿ ಮೀರಿ ವಾಸವಾಗಿರುವ ವಿದೇಶಿಯರನ್ನು ಗಡಿಪಾರು ಮಾಡಲಾಗಿರುವ ವಿದೇಶಿಯರ ವಿವರ |
|---|---|---|---|
| 01 | ಬೆಂಗಳೂರು ನಗರ | 2021 | 11 |
| | | 2022 | 06 |
| | | 2023 | 116 |
| | | 2024 | 143 |
| 02 | ಕಲಬುರಗಿ ನಗರ | 2024 | 01 |
| | | ಒಟ್ಟು | 277 |

**ಆ)** ಬೆಂಗಳೂರಿನಲ್ಲಿ ಡ್ರಗ್ಸ್ ಮತ್ತು ಮಾದಕ ದ್ರವ್ಯಗಳ ಜಾಲ ಬಹುದೊಡ್ಡದಾಗಿ ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಹಾವಳಿಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;

ಬಂದಿದೆ.

- ಬೆಂಗಳೂರು ನಗರದಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ ಎನ್‌ಡಿಪಿಎಸ್ ರಡಿ 04 (ಇಬ್ಬರು ವಿದೇಶಿಯರನ್ನೊಳಗೊಂಡಂತೆ) ಡ್ರಗ್ಸ್ ಪೆಡ್ಲರ್‌ಗಳ ಸ್ಥಿರಾಸ್ತಿ/ಚರಾಸ್ತಿ ಮುಟ್ಟುಗೋಲುಹಾಕಿ ಕೊಳ್ಳುವುದರ ಜೊತೆಗೆ 12 ಜನ (05 ಜನ ವಿದೇಶಿಯರನ್ನೊಳಗೊಂಡಂತೆ) ಹವ್ಯಾಸಿ ಆರೋಪಿತರಿಗೆ ಎನ್‌ಡಿಪಿಎಸ್ ಕಾಯ್ದೆಯಡಿ ಕ್ರಮ ಜರುಗಿಸಲಾಗಿದೆ. ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ವಿದೇಶಿ ಆರೋಪಿಗಳಿಗೆ ಮಾದಕ ವಸ್ತುಗಳು ಸರಬರಾಜಾಗುವ ಮೂಲಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅಂತಹ ವಿದೇಶಿಯರ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಗಡಿಪಾರಿಗೆ ಕ್ರಮಕೈಗೊಳ್ಳುವುದರ ಮೂಲಕ ಕಟ್ಟುನಿಟ್ಟಿನ ಕ್ರಮ ಅನುಸರಿಸಲಾಗಿದೆ.
- ಬೆಂಗಳೂರು ನಗರದಾದ್ಯಂತ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಶಾಲಾ/ಕಾಲೇಜು/ಹಾಸ್ಟೆಲ್‌ಗಳ ವಿದ್ಯಾರ್ಥಿ /ವಿದ್ಯಾರ್ಥಿನಿಯರಿಗೆ ಮತ್ತು ಸಾರ್ವಜನಿಕರಲ್ಲಿ ಸಭೆಗಳ ಮೂಲಕ ಅರಿವು ಮೂಡಿಸಲಾಗಿದೆ.
- ಜನರು ಹೆಚ್ಚಾಗಿ ಸೇರುವ ಪ್ರತಿಷ್ಠಿತ ಹೋಟೆಲ್, ಪಬ್, ಬಾರ್, ರೆಸ್ಟೋರೆಂಟ್, ಬಸ್ ನಿಲ್ದಾಣ ಇನ್ನಿತರೆ ಪ್ರದೇಶಗಳಲ್ಲಿ ಮಾದಕ ದ್ರವ್ಯ/ವಸ್ತುಗಳ ಮಾರಾಟದ ಬಗ್ಗೆ ಮಾಹಿತಿ ಸಂಗ್ರಹಿಸಿ, ಕಾನೂನು ಕ್ರಮ ಜರುಗಿಸಲಾಗುತ್ತಿದ್ದು, ಜಾಗೃತಿ ಫಲಕಗಳು ಮತ್ತು ಕರಪತ್ರ ಹಂಚುವುದರ ಜೊತೆಗೆ ಕಿರುಚಿತ್ರಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ.

| | | |
|---|---|---|
| | | • ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ ಠಾಣಾ ಮಟ್ಟದಲ್ಲಿ ಗೌಪ್ಯ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ ಮಾದಕ ವಸ್ತು ಬೆಳೆಯುವ ಪ್ರದೇಶ ಮತ್ತು ಸಿಂಥೆಟಿಕ್ ಡ್ರಗ್ಸ್ ಗಳನ್ನು ತಯಾರಿಸುವ ಲ್ಯಾಬ್‌ಗಳ ಹಾಗೂ ಸಂಗ್ರಹಿಸಿಡುವ ಸ್ಥಳಗಳ ಮೇಲೆ ದಾಳಿನಡೆಸಿ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ. |
| **ಇ)** | ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಎಷ್ಟು ಡ್ರಗ್ಸ್ ಮತ್ತು ಮಾದಕ ದ್ರವ್ಯಗಳ ಮಾರಾಟಗಾರರನ್ನು ಬಂಧಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ? (ವಿವರ ನೀಡುವುದು) | 2022 ರಿಂದ 2024 (30.11.2024) ರವರೆಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ದಾಖಲಿಸಿದ ಪ್ರಕರಣಗಳು ಹಾಗೂ ಬಂಧಿಸಿದ ಆರೋಪಿಗಳ ಸಂಖ್ಯೆ ಈ ಕೆಳಕಂಡಂತಿದೆ:- |

| ವರ್ಷ | ಮಾದಕ ದ್ರವ್ಯ ಮಾರಾಟಗಾರರ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆ | ಬಂಧಿಸಿದ ಮಾದಕ ದ್ರವ್ಯ ಮಾರಾಟಗಾರರ ಸಂಖ್ಯೆ |
|---|---|---|
| 2022 | 579 | 977 |
| 2023 | 677 | 984 |
| 2024 | 420 | 584 |

ಒಇ 462 ಪಿಎಂಎಸ್ 2024

**(ಡಾ: ಜಿ. ಪರಮೇಶ್ವರ)**
**ಗೃಹಸಚಿವರು**